ಮೊನ್ನೆ ಒಂದು ನಾಟಕೋತ್ಸವಕ್ಕೆ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗಿದ್ದೆ. ಆರೂವರೆಗೆ ನಿಗದಿಯಾಗಿದ್ದ ನಾಟಕವು, ಅದರ ಉದ್ಘಾಟನೆಯ ಸಮಾರಂಭ ಲಂಬಿಸಿದ್ದರಿಂದಾಗಿ ಒಂಬತ್ತಾದರೂ ಶುರುವಾಗುವ ಲಕ್ಷಣ ಕಾಣಿಸಲಿಲ್ಲ. ಈ ಲಂಬ, ವಿಳಂಬ ಕಾರ್ಯಕ್ರಮದ ಹೂರಣ ಕಾರಣವಾಗಿ ಅಲ್ಲ, ಒಬ್ಬ ನಿರೂಪಕರ 'ಅತಿ'ಯಾದ ನಿರೂಪಣೆಯಿಂದಾಗಿ! ಸಭಾಂಗಣದಲ್ಲಿ ನೆರೆದಿದ್ದ ಐವತ್ತೇ ಜನರಲ್ಲಿ ಹತ್ತು ಜನ ಬಿಟ್ಟೆದ್ದು ಹೋಗುವುದನ್ನು ಕಂಡರೂ ಅವರೇನೂ ಕ್ಯಾರೆ ಎನ್ನಲಿಲ್ಲ. ಇನ್ನೂ ಅದೇ ಉತ್ಸಾಹದಲ್ಲಿ ನಿರೂಪಿಸುತ್ತಲೇ ಇದ್ದರು! ಬೇಸರದ ಪರಮಾವಧಿ ತಲುಪಿದ ನಾವು ಸಭಾತ್ಯಾಗ ಮಾಡುವ ಶಾಸಕರಂತೆ ಅನಿವಾರ್ಯವಾಗಿ ಎದ್ದು ಹೊರಬಂದೆವು.

ಇಂಥ ಅತಿ ಬೋರ್ ನಿರೂಪಣಾ ವೀರರು ಪ್ರತಿ ಊರಲ್ಲೂ ಒಬ್ಬಿಬ್ಬರು ಸಿಗುತ್ತಾರೆ. ಯಾವುದೇ ದೊಡ್ಡ ಮೀಡಿಯಾ ಇವೆಂಟ್ ಇರಲಿ ಅದರ ನಿರೂಪಣೆಯ ಜವಾಬ್ದಾರಿಯನ್ನು ಅದು ಹೇಗೋ ಇವರು ತಮ್ಮ ಹೆಗಲಿಗೇ ಹಾಕಿಸಿಕೊಳ್ಳುತ್ತಾರೆ. ನಿರೂಪಣೆಗೆಂದೇ ಹೊಲಿಸಿರುವ ಎರಡು ಜೊತೆ ಜುಬ್ಬಾಗಳಲ್ಲಿ ಒಂದನ್ನು ತೊಟ್ಟುಕೊಂಡು ಸಭಿಕರ ಸಹನಾಪರೀಕ್ಷೆ ಮಾಡಲು ರಂಗಕ್ಕೆ ಧುಮುಕುತ್ತಾರೆ.

ಆಲೋಚಿಸಿ ನೋಡಿದರೆ ನಿರೂಪಣೆಯೆಂಬುದು ಎರಡು ಭಾಷಣ ಅಥವಾ ಎರಡು ಹಾಡುಗಳ ನಡುವೆ ತನ್ನ ಕ್ಲೋಸಿಂಗ್ ಮತ್ತು ಓಪನಿಂಗ್ ಅನೌನ್ಸ್‌ಮೆಂಟುಗಳ ಮೂಲಕ ಸಾತತ್ಯದ ಬೆಸುಗೆ ಹಾಕುವ ಕಲಾಯಿಗಾರನ ಕೆಲಸ ಅಷ್ಟೇ. ತಡವಾಗಿ ಸಭಾಂಗಣಕ್ಕೆ ಬರುವ ಒಬ್ಬ ಸಭಿಕನಿಗೆ ವೇದಿಕೆ ಮೇಲೆ ಯಾರು, ಏನು ಮಾತಾಡುತ್ತಿದ್ದಾರೆ ಎಂಬ ಅಂದಾಜಿರುವುದಿಲ್ಲ. ಹಾಗಾಗಿ ಆ ಭಾಷಣ/ಸಂಗೀತ ಮುಗಿದ ನಂತರ ನಿರೂಪಕ ನೀಡುವ ಕ್ಲೋಸಿಂಗ್ ಅನೌನ್ಸ್‌ಮೆಂಟ್‌ನಿಂದಾಗಿ ತಾನು ಈವರೆಗೆ ಕೇಳಿಸಿಕೊಂಡದ್ದೇನು ಎಂದು ತಿಳಿದುಕೊಳ್ಳುತ್ತಾನೆ. ಓಪನಿಂಗ್ ಅನೌನ್ಸ್‌ಮೆಂಟಿನಿಂದ ಮುಂದಿನ ಅನಾಹುತದ ಅಥವಾ ಆನಂದದ ಮುನ್ಸೂಚನೆಯನ್ನು ಪಡೆಯುತ್ತಾನೆ. ಮುಂದಿನ ಭಾಷಣವೊಂದು ಅನಾಹುತ ಎಂಬ ಸುಳಿವು ಅವನಿಗೆ ಸಿಕ್ಕರೆ ಸುಮ್ಮನೆ ಫೋನು ಕಿವಿಗಿಟ್ಟುಕೊಂಡು ಪಿಸುಗುಡುತ್ತ ಹೊರನಡೆದುಬಿಡುತ್ತಾನೆ.

ಅದೇ ಮುಂದಿನ ಭಾಷಣ ಒಂದು ರಸದೌತಣವೆಂಬ ಅಂದಾಜು ಸಿಕ್ಕರೆ ಫೋನನ್ನು ಸೈಲೆಂಟಿಗೆ ಹಾಕಿ ಸೀಟಿನ ತುದಿಗೆ ಸರಿದು ಕೂರುತ್ತಾನೆ. ಆದರೆ ಈ ಇಬ್ಬರ ನಡುವೆ ಸ್ಯಾಂಡ್‌ವಿಚ್ಚಿನಂತೆ ಸಿಗಿಬಿದ್ದು ಜೀವ ತಿನ್ನುತ್ತಿರುವ ನಿರೂಪಕನ ಕೊರೆತದಿಂದ ಮಾತ್ರ ತಪ್ಪಿಸಿಕೊಳ್ಳಲಾಗದೆ ಚಡಪಡಿಸುತ್ತ ಸೀಟಿನ ಕವರನ್ನೋ, ಕೈಯಾಸರೆಯ ಪಟ್ಟಿಯನ್ನೋ ಕಿತ್ತುಹಾಕುತ್ತ ಕುಳಿತುಕೊಳ್ಳುತ್ತಾನೆ! ಆ ದೃಷ್ಟಿಯಿಂದ ನೋಡಿದರೆ ರಂಗಮಂದಿರದ ಸೀಟುಗಳ ಆರೋಗ್ಯವೇ ಆ ಊರಿನ ನಿರೂಪಕರ ನಿಜವಾದ ಮಾನದಂಡವೆನ್ನಬಹುದು!

ಇರಲಿ, ಸಭಿಕರ ಅದೃಷ್ಟವನ್ನಾಧರಿಸಿ ಚಿತ್ರಾನ್ನದಲ್ಲಿ ನಿಂಬೆ ಬೀಜದಂಥ ಕಹಿ ನಿರೂಪಕನೋ ಇಲ್ಲ ಪಲಾವಿನಲ್ಲಿ ಸಿಗುವ ಗೋಡಂಬಿಯಂಥ ಒಳ್ಳೆ ನಿರೂಪಕನೋ ಸಿಗುತ್ತಾರೆ. ಯಾವ ಹೂವು ಯಾರ ಮುಡಿಗೆ ಎಂಬುದರ ಫೈಸಲ್ ಆಗುವುದು ಮಾತ್ರ ಕಾರ್ಯಕ್ರಮಕ್ಕೆ ನಾವು ಹೋಗಿ ಸಿಲುಕಿಕೊಂಡಾಗಲೇ! ಅಂದರೆ ಒರಳೊಳಗೆ ತಲೆಯಿಟ್ಟ ಮೇಲೆಯೇ! ತಪ್ಪಿಸಿಕೊಳ್ಳುವಂತಿಲ್ಲ, ಇದ್ದು ಅನುಭವಿಸುವಂತಿಲ್ಲ.

